# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 123 ವಿಜಯನಗರ ಬೆಂಗಳೂರು-40

ಸಂ:ಸ.ಅ/ವಾರ್ಡ್ ಸಮಿತಿ/ MIS/ಸಭೆ- /21-22 ದಿ:03.09.2021

### ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಬಿ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:03.09.2021 ರಂದು ವಾರ್ಡ್ ಸಂಖ್ಯೆ: 123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು**

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀಮತಿ. ಸುಮಿತ್ರ ಬಿ. ಎಸ್ | Assessor |
| 5. | ಶ್ರೀ. ಮಂಜು ಎಂ.ವಿ | Marshal |

ದಿನಾಂಕ: 03.09.2021 ರಂದು, ಸಮಯ 11.30 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. Mask ಧರಿಸದ ಸಾರ್ವಜನಿಕರಿಗೆ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ Smoking ಮಾಡುವ ಸಾರ್ವಜನಿಕರಿಗೆ ರೂ: 250/- ದಂಢ ವಿಧಿಸಲು ನೋಡಲ್ ಅಧಿಕಾರಿ ರವರು Marshall ರವರಿಗೆ ಸೂಚಿಸಿದರು.
2. AG Peter ರವರು ಜಂಟಿ ಆಯುಕ್ತರು (ದಕ್ಷಿಣ) ರವರಿಂದ ಸೇಕ್ಷನ್ 5 (1) ರ ಪ್ರಕಾರ ನೋಟಿಸ್ ಜಾರಿಗೊಳಿಸಬೇಕಾಗಿರುತ್ತದೆಂದು, ಕಂದಾಯ ಅಧಿಕಾರಿ ರವರು ಸಭೆಯ ಗಮನಕ್ಕೆ ತಂದರು.
3. Metro Line ರಸ್ತೆ ಹಾಗೂ 7ನೇ ಮುಖ್ಯರಸ್ತೆಯ ಬಳಿ ಇನ್ನು ಮರದ ದಿಮ್ಮಿಗಳನ್ನು ತೆರವುಗೊಳಿಸಿರುವುದಿಲ್ಲದ ಕಾರಣ ಅರಣ್ಯ ಇಲಾಖೆ ರವರಿಗೆ ಮತ್ತೊಮ್ಮೇ ತಿಳಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.
4. ಕೋವಿಡ್-19 ರ ಲಸಿಕೆಯನ್ನು ಈಗ ವಾರ್ಡ್ ಕಛೇರಿಯಲ್ಲಿ ನೀಡಲಾಗುತ್ತಿದೆ ಹಾಗೂ ವಾರ್ಡ್ ಸಮಿತಿ ಸಭೆಯಲ್ಲಿ ಕೋವಿಡ್-19 ರ ಲಸಿಕೆಯ ಬಗ್ಗೆ ಚರ್ಚಿಸಲಾಗಿ 45 ವರ್ಷ ಮೇಲ್ಪಟ್ಟವರಿಗೆ ಶೇ: 80% ಮುಗಿದಿದ್ದು, ಈಗ ಮನೆ ಮನೆಗೆ ಹೋಗಿ ಲಸಿಕೆ ನೀಡುವುದಾಗಿ ಆರೋಗ್ಯ ಅಧಿಕಾರಿಗಳು ತಿಳಿಸಿದರು.
5. Trade License ಗಳು Online ನಲ್ಲಿ Renewal ಮಾಡಲಾಗುತ್ತದೆ ಹಾಗೂ ಹೊಸದಾಗಿ ಯಾವುದೆ License ಗಳು ನೀಡಿರುವುದಿಲ್ಲ.
6. "ಬಿ" ಖಾತಾ ನಲ್ಲಿ ಇರುವಂತಹ ನಿವೇಶನಗಳ ಬಗ್ಗೆ ಕಾರ್ಯದರ್ಶಿಗಳು ಕೋರಲಾಗಿ ಅದಕ್ಕೆ ಕಂದಾಯ ಅಧಿಕಾರಿಗಳು ಪ್ರತಿಗಳನ್ನು ನೀಡುವುದಾಗಿ ತಿಳಿಸಿದರು.

7. ವಾರ್ಡ್‌ನಲ್ಲಿರುವ ಪ್ರತಿ ನಾಗರೀಕರಿಗೂ ಸಹ ಮಾಸ್ಕ್ ಮತ್ತು ಸಾಮಾಜಿಕ ಅಂತರ, ಸೋಂಕಿನ ಲಕ್ಷಣಗಳು, ಪಲ್ಸ್ (ನಾಡಿ ಮಿಡಿತ) ಆಕ್ಸಿಮೀಟರ್ ಮತ್ತು ರೋಗದ ಸ್ಥಿತಿಯ ಬಗ್ಗೆ ಅರಿವು ಮೂಡಿಸಲು BLO ಗಳನ್ನು ಕಳುಹಿಸಲಾಗುತ್ತಿದೆ ಎಂದು ಕಂದಾಯ ಆಧಿಕಾರಿಗಳು ತಿಳಿಸಿದರು.

8. ವ್ಯಾಕ್ಸಿನೇಷನ್:- ವಾರ್ಡ್ ವ್ಯಾಪ್ತಿಯಲ್ಲಿ ಲಸಿಕೆಯನ್ನು ಗರಿಷ್ಠ ಮಟ್ಟದಲ್ಲಿ ಯಶಸ್ವಿಯಾಗಿ ನೀಡಲಾಗುತ್ತಿದೆ ಎಂದು ಆರೋಗ್ಯ ಅಧಿಕಾರಿಗಳು ಸಭೆಯ ಗಮನಕ್ಕೆ ತಂದುರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

RSangall

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು,